ಸಿ. ಸಿ. ನಂ.- **92/2021**

ಸಿ.ಡಬ್ಲ್ಯೂ.- **3** / ಪಿ.ಡಬ್ಲ್ಯೂ.- **3**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ **16-10-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಗವಿಸಿದ್ದಪ್ಪ ಅಂಗಡಿ |
| ತಂದೆಯ ಹೆಸರು - | ಶಿವಪ್ಪ |
| ವಯಸ್ಸು - | **69** ವರ್ಷಗಳು |
| ಉದ್ಯೋಗ - | ನಿವೃತ್ತ ಹೆಡ್ ಕ್ಯಾಷಿಯರ್ |
| ವಾಸಸ್ಥಳ - | ಕೊಪ್ಪಳ |

ಮುಖ್ಯ ವಿಚಾರಣೆ-ಮಾನ್ಯ ಎ. ಪಿ. ಪಿ. ಅವರಿಂದ

ಸಾಕ್ಷಿ ನಿಪಿ-2 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3 ರಿಂದ 6ರ ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ.

ದಿಃ **25.01.2016** ರಂದು ಹೊಸಪೇಟೆ ಶಾಖೆಯ ನೆಹರೂ ಕಾಲೋನಿಯಲ್ಲಿರುವ ಎಸ್ ಹೆಚ್ ಬಿ ಹೆಚ್ ಬ್ಯಾಂಕ್ ನಲ್ಲಿ ಆರೋಪಿ ಪೃದ್ವಿರಾಜ್ ರವರು ಬ್ಯಾಂಕಿನ ಗ್ರಾಹಕರ ಖಾತೆಯಿಂದ ತಮ್ಮ ಸ್ನೇಹಿತರ ಖಾತೆಗೆ ಹಣ ವರ್ಗಾವಣೆ ಮಾಡಿಸಿಕೊಂಡು, ಮೋಸ ಮಾಡಿರುವ ಕುರಿತು ಪಂಚನಾಮೆ ಜರುಗಿಸಲಾಯಿತು. ಆ ದಿನ ನನ್ನ ಜೊತೆ ಚಾಸಾ.2 ಮತ್ತು 4 ಹಾಗೂ 1ರವರು ಇದ್ದರು. ಈ ರೀತಿ ಪಂಚನಾಮೆಯನ್ನು ಎಸ್ ಹೆಚ್ ಬಿ ಹೆಚ್ ಬ್ಯಾಂಕ್ ನ ಬಾಗಿಲಿನ ಪಕ್ಕದಲ್ಲಿ ಇರುವ ಕಂಪ್ಯೂಟರ್ ಇಟ್ಟಿರುವ ಟೇಬಲ್ ಬಳಿ ಮಾಡಲಾಯಿತು. ಅಲ್ಲಿ ಆರೋಪಿ ಪ್ರತಿದಿನ ಕೂತು ಕೆಲಸ ಮಾಡುತ್ತಿದ್ದರು. ಸದರಿ ಪಂಚನಾಮೆಯನ್ನು ಮಧ್ಯಾಹ್ನ 3.00 ಗಂಟೆಗೆ ಜರುಗಿಸಲಾಯಿತು.

ಪಾಟೀ ಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಜಿ ವಿ ಪಿ ರವರಿಂದ-

ಪಂಚನಾಮೆಗೆ ಬರಲು ಮ್ಯಾನೇಜರ್ ತಿಳಿಸಿದ್ದರು. ಅವರು ಚಾಸಾ.1 ಆಗಿರುತ್ತಾರೆ. ಅವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಈ ರೀತಿ ಪಂಚನಾಮೆಗೆ ಬರಲು ಚಾಸಾ.1ರವರು ಲಿಖಿತ ಆದೇಶ ಕೊಟ್ಟಿರಲಿಲ್ಲ ಆದರೆ ನಾನು ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದುದ್ದರಿಂದ ಪಂಚನಾಮೆಗೆ ಸಹಿ ಮಾಡಲು ಹೇಳಿದ್ದರು. ಪಂಚನಾಮೆ ಜರುಗಿಸುವಾಗ ಸ್ಥಳದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಸಾರ್ವಜನಿಕರು ಇದ್ದರು. ಸದರಿ ಪಂಚನಾಮೆಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ನನಗೆ

ಸಿ. ಸಿ. ನಂ.- **92/2021**

ಸಿ.ಡಬ್ಲ್ಯೂ.- **3** / ಪಿ.ಡಬ್ಲ್ಯೂ.- **3**

ಗೊತ್ತಿಲ್ಲ. ನಿಪಿ-3 ರಿಂದ 6ರ ಭಾವಚಿತ್ರಗಳನ್ನು ಯಾರು ಯಾವ ಯಂತ್ರಗಳಿಂದ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಭಾವಚಿತ್ರಗಳನ್ನು ತೆಗೆದ ಬಗ್ಗೆ ಪಂಚನಾಮೆಯಲ್ಲಿ ನಮೂದುಮಾಡಿರುವುದು ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ.1ರವರು ಸಹಿ ಮಾಡಲು ಹೇಳಿದ್ದರಿಂದ ನಾನುಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಬರೆದಿರುವ ಮಾಹಿತಿ ಗೊತ್ತಿಲ್ಲ ಎಂದರೆ ಸಾಕ್ಷಿ ನಾನು ಅದನ್ನು ಓದಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಪಂಚನಾಮೆ ಜರುಗಿಸದೇ ಇದ್ದರೂ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.